ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಕೊಳವೆ ಬಾವಿಗಳು

೬೫೦ (೧೨೪೪) ಶ್ರೀ ಎಸ್.ಆರ್. ಲಕ್ಷ್ಮಯ್ಯ (ಬೀರೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೩ನೇ ವರ್ಷದಿಂದ ಇಲ್ಲಿಯವರೆಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಂಜೂರಾಗಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ?

ಆ) ೧೯೮೩ಕ್ಕೆ ಪೂರ್ವದಲ್ಲಿ ಇದ್ದ ಕೊಳವೆ ಬಾವಿಗಳ ಸಂಖ್ಯೆ, ಹೆಚ್ಚಾಗಿರುವ ಕೊಳವೆ ಬಾವಿಗಳ ಸಂಖ್ಯೆಗೆ ಆನುಗುಣವಾಗಿ ಸಿಬ್ಬಂದಿಯನ್ನು ಹೆಚ್ಚಿಸದೇ ಇರುವುದರಿಂದ ಇಲಾಖೆಯು ಸಂಬಂಧಪಟ್ಟ ಸಿಬ್ಬಂದಿಯವರಿಗೆ ದುರಸ್ತಿ ಮಾಡಲು ಕಷ್ಟವಾಗಿಲ್ಲವೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೧೩೯ (೧-೪-೧೯೮೩ ರಿಂದ ೩೦-೬-೧೯೮೫ ರವರೆಗೆ)

ಆ) ೧೯೮೩ರ ಪೂರ್ವದಲ್ಲಿ ೨೦೧೦ ಕೊಳವೆ ಬಾವಿಗಳಿದ್ದವು.

ತರಬೇತಿ ಪಡೆದ ಮತ್ತು ಕುಶಲ ಸಿಬ್ಬಂದಿಯ ಕೊರತೆ ಇರುವುದರಿಂದ ದುರಸ್ತಿ ಮಾಡಲು ಇಲಾಖೆಯು ಕಷ್ಟವನ್ನೆದುರಿಸುತ್ತಿದೆ.

ಮೈಸೂರಿನಲ್ಲಿ ಕನ್ನಡ ತರಬೇತಿಯನ್ನು ನಡೆಸುವುದು

೬೫೧ (೧೩೭೭) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ.—

ಅ) ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಉನ್ನತ ಜ್ಞಾನ ಹೊಂದುವ ಉದ್ದೇಶದಿಂದ ಸರಕಾರವು ೪ ವರ್ಷಗಳ ಕನ್ನಡ ತರಬೇತಿಯನ್ನು ಮೈಸೂರಿನಲ್ಲಿ ನಡೆಸುತ್ತಾ ಬಂದಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಇಲ್ಲಿ ಭೋಧಿಸುವ ವಿಷಯಗಳು ಯಾವುವು ?

ಇ) ಇಲ್ಲಿ ಉತ್ತೀರ್ಣರಾದವರನ್ನು ಯಾವ ಸ್ಥಳಗಳಲ್ಲಿ ನೇಮಕ ಮಾಡಲಾಗುತ್ತಿದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಇಲ್ಲಿ ಭೋದಿಸುವ ವಿಷಯಗಳು ಕೆಳಕಂಡಂತಿವೆ:—

ಅ) ಕನ್ನಡ ಪದ್ಯ, ನಾಟಕ, ಸಾಹಿತ್ಯಚರಿತ್ರೆ ವ್ಯಾಕರಣ, ಭಾಷಾಚರಿತ್ರೆ, ಅಲಂಕಾರ ಚಂದಸ್ಸು ಹಾಗೂ

ಆ) ಸಂಸ್ಕೃತ ಗದ್ಯ, ಪದ್ಯ, ನಾಟಕ, ಅಲಂಕಾರ, ಚಂದಸ್ಸು, ವ್ಯಾಕರಣ ಭಾಷಾ ಚರಿತ್ರೆ.

ಇ) ಈ ತರಬೇತಿಯಲ್ಲಿ ಉತ್ತೀರ್ಣರಾದವರನ್ನು ಪ್ರಾಥಮಿಕ ಶಾಲಾ ಶಿಕ್ಷಕರ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಪ್ರೌಢಶಾಲೆಗಳ ಭಾಷಾ ಅಧ್ಯಾಪಕರಾಗಿ ೧೯೮೨ ರವರೆಗೆ ಬಡ್ತಿ ಕೊಡ ಲಾಗುತ್ತಿತ್ತು. ೧೯೮೨ರ ನಂತರ ಸರ್ಕಾರದ ಆದೇಶದ ಮೇರೆಗೆ ಬಡ್ತಿಯನ್ನು ಬಿ.ಎಡ್. ಆದವರಿಗೆ ಮಾತ್ರ ಸೀಮಿತಗೊಳಿಸಲಾಗಿದೆ.